ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ, ಚಿಕ್ಕಮಗಳೂರು ಜಿಲ್ಲೆ,
ಚಿಕ್ಕಮಗಳೂರು - 577 101, ಕರ್ನಾಟಕ
OFFICE OF THE DEPUTY COMMISSIONER AND DISTRICT MAGISTRATE,
CHIKKAMAGALURU DISTRICT, CHIKKAMAGALURU - 577 101, Karnataka.
Tel.08262-230401(O), 230402(R), 231499(ADC), 235262(Rev.Sec.), 231222 (Fx.)
email:dcckmlr@gmail.com, deo.cmagalur@gmail.com

ನಂ.ಸಿಬ್ಬಂದಿ(2)ಸಿಆರ್ 99/2019-20 ದಿನಾಂಕ: 04-04-2020

ಜಿಲ್ಲಾ ವಿಜ್ಞಾನ ಸೂಚನಾಧಿಕಾರಿ,
ಜಿಲ್ಲಾ ವಿಜ್ಞಾನ ಸೂಚನಾ ಕೇಂದ್ರ,
ಜಿಲ್ಲಾ ಪಂಚಾಯಿತಿ,
ಚಿಕ್ಕಮಗಳೂರು.

ಮಾನ್ಯರ,

ವಿಷಯ:ಚಿಕ್ಕಮಗಳೂರು ಜಿಲ್ಲೆಯಲ್ಲಿ ಖಾಲಿ ಇರುವ ಗ್ರಾಮಲೆಕ್ಕಿಗರ ಹುದ್ದೆಗಳನ್ನು ಆನ್ ಲೈನ್ ಮುಖಾಂತರ ಭರ್ತಿ ಮಾಡುವ ಕುರಿತು.

ಉಲ್ಲೇಖ:ಈ ಕಛೇರಿಯ ಸಮಸಂಖ್ಯೆ ಅಧಿಸೂಚನೆ ದಿನಾಂಕ: 18-02-2020.

*****

ವಿಷಯಕ್ಕೆ ಸಂಬಂಧಿಸಿದಂತೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಖಾಲಿ ಇರುವ 50 ಗ್ರಾಮಲೆಕ್ಕಿಗರ ಹುದ್ದೆಗಳನ್ನು ಭರ್ತಿ ಮಾಡಲು ಆನ್ ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಈ ಸಂಬಂಧ ಸ್ವೀಕೃತಗೊಂಡಿರುವ ಆನ್ ಲೈನ್ ಅರ್ಜಿಗಳ ಪೈಕಿ ಕ್ರಮಬದ್ಧವಾಗಿರುವಂತಹ ಅರ್ಜಿಗಳನ್ನು ಮಾತ್ರ ಪರಿಗಣಿಸಿ ಮೆರಿಟ್ ಆಧಾರದ ಮೇರೆ ವರ್ಗವಾರು 1:10 ಅನುಪಾತದಲ್ಲಿ ಮೆರಿಟ್ ಪಟ್ಟಿಯನ್ನು ದಿನಾಂಕ: 03-04-2020 ರಂದು ಪ್ರಕಟಿಸಬೇಕಾಗಿತ್ತು. ಆದರೆ ಕೋವಿಡ್-19 ಕರ್ಫ್ಯೂ ಜಾರಿಯಲ್ಲಿರುವ ಹಿನ್ನೆಲೆಯಲ್ಲಿ ನೇಮಕಾತಿ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದ್ದು, ವಿಚಾರವನ್ನು ಈ ಕೆಳಗಿನಂತೆ ಜಿಲ್ಲಾ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಕೋರಿದೆ.

## ಪ್ರಕಟಣೆ

**ಚಿಕ್ಕಮಗಳೂರು ಜಿಲ್ಲಾ ಗ್ರಾಮಲೆಕ್ಕಿಗರ ನೇಮಕಾತಿ ಪ್ರಕ್ರಿಯೆ - 2020**

ಚಿಕ್ಕಮಗಳೂರು ಜಿಲ್ಲೆಯಲ್ಲಿ ಖಾಲಿ ಇರುವ 50 ಗ್ರಾಮಲೆಕ್ಕಿಗರ ಹುದ್ದೆಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆನ್ ಲೈನ್ ಮೂಲಕ ಆಹ್ವಾನಿಸಲಾಗಿದ್ದು, ದಿನಾಂಕ: 24-03-2020ಕ್ಕೆ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ ನಿಗದಿಪಡಿಸಲಾಗಿರುತ್ತದೆ.

ಈ ಸಂಬಂಧ ಮೆರಿಟ್ ಪಟ್ಟಿಯನ್ನು (1:10ರಂತೆ) ದಿನಾಂಕ: 03-04-2020 ರಂದು ಆನ್ ಲೈನ್ ನಲ್ಲಿ ಪ್ರಚುರಪಡಿಸಬೇಕಿದ್ದಿತು. ಆದರೆ ಪ್ರಸ್ತುತ ಕೋವಿಡ್-19ರ ಹಿನ್ನೆಲೆಯಲ್ಲಿ ದೇಶದಾದ್ಯಂತ Lockdown ಜಾರಿಯಲ್ಲಿರುವುದರಿಂದ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದ್ದು, ನಂತರದ ಪ್ರಕ್ರಿಯೆಯ ಮಾಹಿತಿಯನ್ನು ಇದೇ ವೆಬ್ ಸೈಟ್ ಮೂಲಕ ತಿಳಿಸಲಾಗುವುದು.

ತಮ್ಮ ವಿಶ್ವಾಸಿ,

ಅಪರ ಜಿಲ್ಲಾಧಿಕಾರಿ,
ಚಿಕ್ಕಮಗಳೂರು ಜಿಲ್ಲೆ,
ಚಿಕ್ಕಮಗಳೂರು.